ತೆರಿಗೆ ವಿನಾಯಿತಿಗಳೂ ಬೇಡ, ಸಂಪೂರ್ಣ ತೆರಿಗೆರಹಿತವಾಗಿ ಎಲ್ಲ ಸಂಬಳವೂ ಕೈಗೆ ಬಂದರೆ ಸಾಕು,'' ಎಂದು ಬಯಸುವ, 7.50 ಲಕ್ಷ ರೂ. ಆದಾಯ ಹೊಂದಿರುವ ವ್ಯಕ್ತಿಗಳು ಹೊಸ ತೆರಿಗೆ ಪದ್ಧತಿಗೆ ಧಾರಾಳವಾಗಿ ಹೋಗಬಹುದು. ಒಂದು ವೇಳೆ ಆದಾಯವು 7.50 ಲಕ್ಷ ರೂ. ದಾಟುವ ಪರಿಸ್ಥಿತಿ ಎದುರಾದರೆ, 'ಐಟಿಆರ್' ಫೈಲ್ ಮಾಡುವ ಗಡುವಿನ ದಿನಾಂಕದೊಳಗೆ ಹಳೇ ತೆರಿಗೆ ಪಾವತಿಗೆ ಶಿಫ್ಟ್ ಆಗಬಹುದು. ಹೋಮ್‌ಲೋನ್ ಅಥವಾ ಉಳಿತಾಯ ಯೋಜನೆಗಳನ್ನು ತೋರಿಸಿ '80ಸಿ' ಅನ್ವಯ ತೆರಿಗೆ ವಿನಾಯಿತಿ ಪಡೆದು ತೆರಿಗೆ ಉಳಿಸಲು ಅವಕಾಶವಿದೆ.

## ಬದಲಾಗುವ ಮೊದಲು ಯೋಚಿಸಿ

ಹಳೆಯ ತೆರಿಗೆ ಪಾವತಿ ಪದ್ಧತಿಯಿಂದ ಹೊಸತಕ್ಕೆ, ಅಥವಾ ಹೊಸದರಿಂದ ಹಳೆಯದಕ್ಕೆ ಪದೇಪದೇ ಶಿಫ್ಟ್ ಆಗಬಹುದೇ? ಬಿಜಿನೆಸ್‌ನಿಂದ ಆದಾಯ ಪಡೆಯುವ ಜನರು, ವೃತ್ತಿಪರ ಆದಾಯ ಉಳ್ಳವರು, ಮನೆ ಬಾಡಿಗೆಯಿಂದ ಆದಾಯ ಪಡೆಯುವ ವ್ಯಕ್ತಿಗಳು ತಮ್ಮ ಜೀವಿತದಲ್ಲಿ ಒಂದು ಸಲವಷ್ಟೇ ತೆರಿಗೆ ಪಾವತಿ ಪದ್ಧತಿಗಳನ್ನು ಬದಲಿಸಲು ಅವಕಾಶವಿದೆ. ಆದರೆ, ವೇತನದಾರರು ಪ್ರತಿ ವರ್ಷವೂ ತಮಗೆ ಅನುಕೂಲಕರವಾದ ತೆರಿಗೆ ಪಾವತಿ ಪದ್ಧತಿಗೆ ಶಿಫ್ಟ್ ಆಗಲು ಅವಕಾಶವಿದೆ.

## ಹಳೇ ತೆರಿಗೆ ಪದ್ಧತಿ ಯಾರಿಗೆ ಬೆಸ್ಟ್?

- ನೀವು ಹೋಮ್‌ಲೋನ್ ಹೊಂದಿದ್ದು, '80ಸಿ' ಅಡಿಯಲ್ಲಿ ತೆರಿಗೆ ವಿನಾಯಿತಿ ಪಡೆಯುವ ಎಲ್ಲ ಆಯ್ಕೆಗಳನ್ನೂ ಹೊಂದಿದ್ದರೆ ಹಳೇ ತೆರಿಗೆ ಪದ್ಧತಿಯಲ್ಲಿಯೇ ಮುಂದುವರಿಯುವುದು ಸೂಕ್ತ ಎನ್ನುತ್ತಾರೆ ತೆರಿಗೆ ತಜ್ಞರು. ಒಂದು ಉದಾಹರಣೆ ಮೂಲಕ ನೋಡುವುದಾದರೆ, ಐಟಿ ಕಂಪನಿಯಲ್ಲಿ ಕೆಲಸ ಮಾಡುವ ರಮೇಶನ ವಾರ್ಷಿಕ ಆದಾಯವು 25 ಲಕ್ಷ ರೂ. ಇದೆ. ಹಳೆಯ ತೆರಿಗೆ ಪದ್ಧತಿಯಲ್ಲಿ ಸ್ಟ್ಯಾಂಡರ್ಡ್




ಜಗತ್ತಿನಲ್ಲಿವೆ. ಸಾವಿರಾರು ಚಿತ್ರವಿಚಿತ್ರ, ಹಾಸ್ಯಾಸ್ಪದ ಮತ್ತು ಭಯಾನಕ ತೆರಿಗೆಗಳು ಜಗತ್ತಿನಲ್ಲಿ ಕಂಡು ಬರುತ್ತವೆ. ಅಂಥ ಕೆಲವು ಉದಾಹರಣೆಗಳೆಂದರೆ:

- ಇಂಗ್ಲೆಂಡ್‌ನಲ್ಲಿ ಕಿಟಕಿಗೂ ತೆರಿಗೆ ಇತ್ತು. ಮನೆಯಲ್ಲಿನ ಕಿಟಕಿಗಳ ಸಂಖ್ಯೆಗೆ ಅನುಗುಣವಾಗಿ ತೆರಿಗೆ ಅನ್ವಯವಾಗುತ್ತಿತ್ತು. ಕೆಲವರು ತೆರಿಗೆ ತಪ್ಪಿಸಲು ಮನೆಗೆ ಕಿಟಕಿಯನ್ನೇ ಇಡುತ್ತಿರಲಿಲ್ಲ. 1851ರಲ್ಲಿ ಕಿಟಕಿ ತೆರಿಗೆಯನ್ನು ಬ್ರಿಟನ್‌ನಲ್ಲಿ ವಾಪಸ್ ಪಡೆಯಲಾಯಿತು.
- ಐರ್ಲೆಂಡ್ ಮತ್ತು ಡೆನ್ಮಾರ್ಕ್‌ನಲ್ಲಿ ದನಗಳು ಹೂಸು ಬಿಡುತ್ತವೆ ಎಂಬ ಕಾರಣಕ್ಕಾಗಿ ತೆರಿಗೆ ವಿಧಿಸಲಾಗುತ್ತಿತ್ತು. ಪ್ರತಿ ದನಕ್ಕೆ 110 ಡಾಲರ್ ತೆರಿಗೆ ನಿಗದಿಯಾಗಿತ್ತು.
- ರೋಮ್‌ನಲ್ಲಿ ಮಾನವ ಮೂತ್ರಕ್ಕೆ ತೆರಿಗೆ ನಿಗದಿಯಾಗಿತ್ತು. ಆಗ ಮೂತ್ರವನ್ನು ರಾಸಾಯನಿಕ ಕ್ರಿಯೆ ಮತ್ತು ಇತರ ಉದ್ದೇಶಕ್ಕೆ ಬಳಸಲಾಗುತ್ತಿತ್ತು. ಹೀಗಾಗಿ ಮಾನವ ಮೂತ್ರಕ್ಕೆ ಒಳ್ಳೆಯ ಬೆಲೆ ಇತ್ತು. ಮೂತ್ರ ಮಾರಾಟ ಮಾಡಿದವರು ತೆರಿಗೆ ಕಟ್ಟಬೇಕಿತ್ತು!
- ಜರ್ಮನಿಯ ತೆರಿಗೆ ಪದ್ಧತಿಯಲ್ಲಿ ನೂರಾರು ಕಾನೂನು, ಸುಮಾರು ಲಕ್ಷದಷ್ಟು ನಿಯಮಗಳಿವೆ.
- ಭಾರತದಲ್ಲಿ ರೇಡಿಯೋಗೆ ವಾರ್ಷಿಕ ತೆರಿಗೆ ಇತ್ತು. ಅಂಚೆ ಕಚೇರಿಯಲ್ಲಿ ತೆರಿಗೆ ಕಟ್ಟಿ ರೇಡಿಯೊ ಕೇಳಬೇಕಿತ್ತು. ತೆರಿಗೆ ತಪ್ಪಿಸಿಕೊಳ್ಳಲು ಕೆಲವರು ಕದ್ದುಮುಚ್ಚಿ ರೇಡಿಯೊ ಕೇಳುತ್ತಿದ್ದರು. ಮೋಟಾರ್ ಸೈಕಲ್ ಬರೋ ತನಕ ಸೈಕಲ್‌ಗಳಿಗೂ ತೆರಿಗೆ ಕಟ್ಟುವ ವ್ಯವಸ್ಥೆ ನಮ್ಮಲ್ಲಿತ್ತು.
- ವೇಶ್ಯಾವೃತ್ತಿಗೆ ತೆರಿಗೆ, ಮದುವೆ ಚಪ್ಪರದ ತೆರಿಗೆ, ತಾಂಬೂಲ ತೆರಿಗೆ – ಹೀಗೆ ನೂರೊಂದು ತೆರಿಗೆಗಳು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದ್ದವು. ತಿಪ್ಪೆಗೂ ತೆರಿಗೆ ವಿಧಿಸಲಾಗುತ್ತಿತ್ತು ಎನ್ನುತ್ತಾರೆ ಇತಿಹಾಸತಜ್ಞರು. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ ಮತ್ತು ಆತನ ಮಿತಿಮೀರಿದ ತೆರಿಗೆಗಳ ಬಗ್ಗೆ ಟಿ.ವಿ. ಮಹಾಲಿಂಗಂ ಅವರ ಪುಸ್ತಕದಲ್ಲಿ ವಿವರಗಳಿವೆ. ವಿಜಯನಗರ ಕಾಲದಲ್ಲಿ 300ಕ್ಕೂ ಅಧಿಕ ತೆರಿಗೆಗಳಿದ್ದವು. ಹುಲ್ಲುಗಾವಲುಗಳಲ್ಲಿ ಹುಲ್ಲು ಮೇಯಿಸಲು ದನಗಳನ್ನು ಹೊಡೆದುಕೊಂಡು ಹೋದರೆ, ಹುಲ್ಲಿನ ತೆರಿಗೆಯನ್ನು ತೆರಬೇಕಾಗಿತ್ತು.